https://www.kuvempuonline.com

**QP CODE 10337–A**



# ಮೂರನೇ ಸೆಮಿಸ್ಟರ್ ಬಿ.ಎ ಪದವಿ ಪರೀಕ್ಷೆ

## ಏಪ್ರಿಲ್/ಮೇ 2019

## ಐಚ್ಛಿಕ ಕನ್ನಡ ಪತ್ರಿಕೆ – ೩

*(ಹೊಸಪಠ್ಯ)*

## SAC – 430: ಕನ್ನಡ ಸೊಲ್ಲರಿಮೆ – ೧

*ಸಮಯ: 3 ಗಂಟೆಗಳು]* *[ಗರಿಷ್ಠ ಅಂಕಗಳು: 80*

'ಅ' ವಿಭಾಗ

'ಸೊಲ್ಲರಿಮೆ'

**1.** *ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ:* 3 x 8 = 24

೧. ಸೊಲ್ಲರಿಮೆ ಎಂದರೇನು? ಕನ್ನಡ ಸೊಲ್ಲರಿಮೆಯ ಸ್ವರೂಪವನ್ನು ವಿವರಿಸಿ.

೨. ಕನ್ನಡಕ್ಕೆ ಅಗತ್ಯವಿರುವ ವರ್ಣಗಳನ್ನು ಆಧುನಿಕರ ದೃಷ್ಟಿಯಲ್ಲಿ ವಿವೇಚಿಸಿ.

೩. "ಕನ್ನಡಕ್ಕೆ ನಾಲ್ಕೇ ವಿಭಕ್ತಿಗಳು" – ಡಿ.ಎನ್.ಎಸ್. ಅಭಿಪ್ರಾಯವನ್ನು ವಿವರಿಸಿ.

೪. ಸಂಧಿ ಎಂದರೇನು? ಕನ್ನಡ ಸಂಧಿಗಳನ್ನು ನಿದರ್ಶನ ಸಮೇತ ಹೆಸರಿಸಿ.

೫. ಶಿಥಿಲದ್ವಿತ್ವ ಎಂದರೇನು? ಅದು ನಡೆಯುವ ಸಂದರ್ಭಗಳನ್ನು ವಿವರಿಸಿ.

**2.** *ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ:* 3 x 3 = 09

೧. ವಚನ ಪಲ್ಲಟ

೨. ಸೊಲ್ಲರಿಮೆಯ ಅಧ್ಯಯನದ ಕ್ರಮಗಳು

೩. ದ್ವಿತ್ವಸಂಧಿಯ ಸಂದರ್ಭ

೪. ಸಹಜ ಹೆಸರು ಪದ

೫. ಭಾಷೆ – ಸಂಸ್ಕೃತಿ – ಸಾಹಿತ್ಯಗಳ ಅಂತರ್ ಸಂಬಂಧ.

**3.** *ಆರಕ್ಕೆ ಕನ್ನಡ ಸೊಲ್ಲರಿಮೆಯ ವಿಶೇಷತೆಗಳನ್ನು ಗುರುತಿಸಿ:* 6 x 2 = 12

೧. ಎತ್ತುಂಗೋಲ್ ವಿರಹಿಗೆ ಚಿತ್ತಭವಂ

೨. ಚಾಮರಿಗ

೩. ತಮರೂರ್ಗೆವೋಪ ಕುಲಜಾಂಗನೆಯರ್

೪. ಕುಕ್ಕುಕ್ಕೋ ಎಂದು ಕೋಳಿ ಕೂಗಿದುವಾಗಳ್

೫. ದಾಂಟು > ದಾಟು/ತಿರುಂಪೆ > ತಿರುಪೆ

೬. ಗುಳುಗಳು ಎನುತುಂ

೭. ಆನೆ ನೂಂಕಿದುವು

೮. ಕೆರೆಯತ್ತಣಿಂ ಪಾರಿದುವು ಹಂಸಕುಳಂ

**4.** *ಐದಕ್ಕೆ ಒಂದು ವಾಕ್ಯದಲ್ಲಿ ಉತ್ತರಿಸಿ:* 5 x 1 = 05

೧. ಶ್ರಾವಣ – ಚಾಕ್ಷುಷ ೨. ಸಂಧಿ ದೋಷ ೩. ದೇಸಿ ವರ್ಣಗಳು

೪. ಧ್ವನಿಮಾ ೫. ಕೃದಂತಗಳು ೬. ದ್ವಿವಚನಂ ೭. ಯೋಗವಾಹಗಳು

*ಮುಂದುವರೆದಿದೆ............2*

https://www.kuvempuonline.com

https://www.kuvempuonline.com

https://www.kuvempuonline.com

https://www.kuvempuonline.com



**QP CODE 10337–A**

## 'ಆ' ವಿಭಾಗ

## 'ಆ ಹೆಣ್ಣೊಡಲ ದನಿ'

5. *ಒಂದು ಪದ್ಯಕ್ಕೆ ಸಾಂಸ್ಕೃತಿಕ ವಿವರಣೆ ನೀಡಿರಿ:* 1 x 5 = 05

೧. ಎಲಾ ಮಡದಿ ಸಂಕೆಣ್ಣೆ ಸಂಕೆಣ್ಣೆ
ಕಟ್ಟಿದ್ದ ತೆರುವನ್ನು ತಕ್ಕೊಂಡು ಬುಟ್ಟು ಬುಡೋಕೆ
ನೀನೇನು ದನುವ ಕರುವ ಕೋಳಿಯ ಆಡ ಎಮ್ಮಾ ಸಂಕೆಣ್ಣೆ
ಇಂತೆ ಕರಚಲುವೆಯಾದ ಮಡದಿಯ
ಈ ಕಾಡುಮೋಡಿನ ಒಂಟೀ ಸೊಪ್ಪಿನ ಗುಳ್ಳಲ್ಲಿ
ಬುಟ್ ಬುಟ್ಟೋಗಕ್ಕೆ ನನ್ಗೆ ತುಂಬಾ ಅನುಮಾನ ಮಡ್ದಿ

೨. ಆ ದಿನ ಕಳೆದು ಮಾರನೆ ದಿನ .
ಮಂಗಳವಾರ ಅಮವಾಸ್ಯೆಯ ಘಲದಲ್ಲಿ ಸಿಂಗರಾಶಿಯಲ್ಲಿ
ಸತ್ಯಮಾಲೋಕ ಬಾಲೆ ಅಕ್ಕೆ ಸಿರಿಯ ಸೀಮಂತಕ್ಕೆ
ವೇಳೆಗಳಿಗೆಯಲ್ಲಿ ನಾಲ್ಕೂರ ಗುರಿಕಾರರು ಕೂಡಿದರು
ಸಂಕರು ಪೂಂಜೆದಿ ಬಂಗಾರದ ಹರಿವಾಣದಲ್ಲಿ
ಹೂ ಸೀರೆ ಹಿಡಿದುಕೊಂಡು ಬಂದರು
ಚೆಂಡು ಮಲ್ಲಿಗೆ ಮುಡಿಸಿದರು ಪಟ್ಟೆಯ ಹೂ ಸೀರೆ ರವಕೆ ಕೊಟ್ಟರು
ಅವರತ್ತೆ ಬಸರೂರ ಬತ್ತಕೇರಿ ಅರಮನೆಯ ಸಂಕರು ಪೂಂಜೆದಿ

6. *ಮೂರು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ:* 3 x 3 = 09

೧. ಜನಪದ ಮಹಾಕಾವ್ಯಗಳ ರಚನಾ ತಂತ್ರವೇನು?

೨. ಗಂಗೆ – ಗೌರಿ ಜಗಳದ ಪ್ರಸಂಗ

೩. ಕಾಂತು ಪೂಂಜ ಪಾತ್ರ ಪರಿಚಯ

೪. ಜನಪದ ಮಹಾಕಾವ್ಯಗಳ ಲಕ್ಷಣಗಳೇನು?

೫. ಹುಟ್ಟು ಬಂಜೆ ಕವಟ್ಲು

7. *ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿರಿ:* 2 x 8 = 16

೧. ಗಂಗೆ – ಗೌರಿಯರ ಜಗಳದಲ್ಲಿ ಹೆಣ್ಣಿನ ಸಹಜ ಅಸೂಯೆಯು ಹೇಗೆ ವ್ಯಕ್ತಗೊಂಡಿದೆ?

೨. ಸ್ತ್ರೀ ಶೋಷಣೆಯ ಪ್ರತಿರೋಧವು 'ಸತ್ಯುವಂತೆ ಸಂಕಮ್ಮ'ಳ ದಿಟ್ಟ ನಡೆಯಲ್ಲಿ ಹೇಗೆ ನಿರೂಪಿತವಾಗಿದೆ?

೩. 'ಸತ್ಯನಾಪುರದ ಸಿರಿ' ಕಾವ್ಯಭಾಗದಲ್ಲಿ 'ಹೆಣ್ಣೊಡಲ ದನಿ' ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

* * * * * * *

https://www.kuvempuonline.com

https://www.kuvempuonline.com

https://www.kuvempuonline.com